# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 19.02.2022 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ, ಕಂದಾಯ ವಸೂಲಿಗಾರರು ಮತ್ತು ಕಾರ್ಯದರ್ಶಿಗಳು,
3. ಶ್ರೀ. ದೀಪಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ. ಶ್ರೀನಿವಾಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ಪಶುಪಾಲನೆ.
5. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು.
6. ಮಣಿ ಮೇಘಾಲಯ್ಯ, ಕಿರಿಯ ಆರೋಗ್ಯ ಪರಿವೀಕ್ಷರು
7. ದೇವರಾಜ್, ಮೇಲ್ವಿಚಾರಕರು
8. ನಾರಾಯಣಸ್ವಾಮಿ, ಮೇಲ್ವಿಚಾರಕರು
9. ನಾಗರಾಜು, ಸೂಪರ್‌ವೈಸರ್
10. ಮುತ್ಯಾಲಪ್ಪ, ಸೂಪರ್‌ವೈಸರ್
11. ದಾಕ್ಷಾಯಿಣಿ ಲಿಂಕ್ ವರ್ಕರ್
12. ಪ್ರಮೀಳ ಲಿಂಕ್ ವರ್ಕರ್
13. ನವೀನ್, ವಾರ್ಡ್ ಮಾರ್ಷಲ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡಿ ಅಪದ್ ಮಿತ್ರ ಯೋಜನೆಯನ್ನು ಅನುಷ್ಠಾನಗೊಳಿಸುವ ಸ್ವಯಂ ಸೇವಕರನ್ನು ಆಯ್ಕೆ ಮಾಡಲು ಎಲ್ಲಾ ಸದಸ್ಯರಿಗೆ ಸೂಚಿಸಿದರು.

ಶ್ರೀ. ಚಿನ್ಮಯ್ ರವರು ಮಾತನಾಡುತ್ತಾ, ಅವರ ಮನೆಯ ಹತ್ತಿರ ಶಿವಂ ಡ್ಯಾನ್ಸ್ ಕ್ಲಾಸ್ ಹತ್ತಿರ ಮರ ಕಡಿತ ಮಾಡಬೇಕೆಂದು ಕೋರಿದರು.

**ಕ್ರಮ: ಅರಣ್ಯ ಇಲಾಖೆ (ರಾಜರಾಜೇಶ್ವರಿನಗರ ವಲಯ)**

ಶ್ರೀ.ಶಶಿಕುಮಾರ್ ರವರು ಮಾತನಾಡಿ ಲಕ್ಷ್ಮಿದೇವಿನಗರ ವಾರ್ಡಿನಲ್ಲಿ ಹೊಸ ಹೊಸ ಮನೆಗಳು ನಿರ್ಮಾಣಗೊಳ್ಳುತ್ತಿದ್ದು, ಸ್ಯಾನಿಟರಿ ಮತ್ತು ನೀರಿನ ಕನೆಕ್ಷನ್‌ಗಾಗಿ ರಸ್ತೆಗಳನ್ನು ಅಗೆಯುತ್ತಿದ್ದು, ಬಿಬಿಎಂಪಿ ಯಿಂದ ಅನುಮತಿಯನ್ನು ಪಡೆಯದೆ ಹಾಗೂ ರಸ್ತೆಯನ್ನು ಅಗೆದು ಹಾಗೆಯೇ ಮುಚ್ಚದೆ ಇರುವ ಮನೆಯ ಮಾಲೀಕರಿಗೆ ಎಚ್ಚರಿಕೆಯನ್ನು ನೀಡಬೇಕೆಂದು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)**

Scanned with CamScanner

ಗೋಪಿನಾಥ್ ಫ್ಲಾಟ್, 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಹಾಗೂ ಗೀತಾ ಶಾಲೆ ಹತ್ತಿರ ಕಾರ್ಯನಿರ್ವಹಿಸುತ್ತಿದ್ದ ವಾಟರ್ ಮೋಟರ್ ಅನ್ನು ತೆರವುಗೊಳಿಸಿದ್ದು, ಅದನ್ನು ಹೊಸದಾಗಿ ಹಾಕಿಕೊಡಬೇಕೆಂದು ಶ್ರೀ.ಮಂಜುನಾಥ್ ರವರು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯು.ಎಸ್.ಎಸ್.ಬಿ)**

ಆರ್.ವಿ.ಶಾಲೆಯ ಹತ್ತಿರ ರಾಜಕಾಲುವೆ ಹಾಳಾಗಿದ್ದು, ಹಸುಗಳು ಕಾಲುವೆಗೆ ಬೀಳುತ್ತಿದ್ದು, ರಾಜಕಾಲುವೆಯನ್ನು ಸರಿಪಡಿಬೇಕೆಂದು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)**

ತರಕಾರಿ ಮಾರುಕಟ್ಟೆ ರಸ್ತೆಯ ಕೆಳಗೆ ಮೋರಿ ಮೇಲೆ ಶೆಡ್ ಚಿಕ್ಕ ಇದ್ದು, ಕಸ ಮಣ್ಣು ತೆಗೆಯಬೇಕು, ಶೆಡ್‌ನ್ನು ತೆರವುಗೊಳಿಸಬೇಕೆಂದು ಶ್ರೀ.ಶಶಿ ರವರು ತಿಳಿಸಿದರು.

**ಕ್ರಮ: ಆರೋಗ್ಯ ಇಲಾಖೆ (ಕಿರಿಯ ಆರೋಗ್ಯ ಪರಿವೀಕ್ಷಕರು), ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ).**

ಶ್ರೀ ಮಧು ರವರು ಸಂಜಯಗಾಂಧಿನಗರ ಸೋನಲ್ ಗಾರ್ಮೆಂಟ್ಸ್ ರೋಡ್‌ನಲ್ಲಿ ಸ್ಟ್ರೀಟ್ ಲೈಟ್ ಹಾಕಿಕೊಡಬೇಕೆಂದು ಹಾಗೂ ವಿದ್ಯುತ್ ಕಂಬಗಳನ್ನು ಹಾಕಿಸಿಕೊಡಬೇಕೆಂದು ತಿಳಿಸಿದರು.

**ಕ್ರಮ: ವಿದ್ಯುಚ್ಛಕ್ತಿ ಇಲಾಖೆ (ರಾಜರಾಜೇಶ್ವರಿನಗರ),**

ಶ್ರೀ ಮಧು ರವರು ಸಂಜಯಗಾಂಧಿನಗರ ಸೋನಲ್ ಗಾರ್ಮೆಂಟ್ಸ್ ರೋಡ್‌ನಲ್ಲಿ ವಿದ್ಯುತ್ ಕಂಬಗಳನ್ನು ಹಾಕಿಸಿಕೊಡಬೇಕೆಂದು ತಿಳಿಸಿದರು.

**ಕ್ರಮ: ಬೆಸ್ಕಾಂ (ರಾಜರಾಜೇಶ್ವರಿನಗರ),**

ಶ್ರೀಮತಿ.ಅಮ್ಮು ರವರು ಮಾತನಾಡಿ ಸೋನಲ್ ಗಾರ್ಮೆಂಟ್ಸ್ ರೋಡ್‌ನಲ್ಲಿ ಐ.ಆರ್.ಪಾಲಿಟೆಕ್ನಿಕ್ ಕಾಲೇಜ್ ಎದುರುಗಡೆ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು, ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ಕ್ರಮ: ಪೋಲೀಸ್ ಇಲಾಖೆ (ನಂದಿನಿ ಲೇಔಟ್)**

ಶ್ರೀ.ಶಶಿ ರವರು ಮಾತನಡುತ್ತಾ ವೀಣಾ ಶಾಲೆಯ ಹತ್ತಿರ ಮಂಜಣ್ಣ ಅಂಗಡಿ ಹತ್ತಿರ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು, ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ಕ್ರಮ: ಪೋಲೀಸ್ ಇಲಾಖೆ (ನಂದಿನಿ ಲೇಔಟ್)**

ರಂಗನಾಥ ಬಾರ್ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ರಸ್ತೆಯಲ್ಲಿ ದಾರಿಹೋಕರು ಓಡಾಡಲು ಸಾಧ್ಯವಾಗುತ್ತಿಲ್ಲ ಹಾಗೂ ಟ್ರಾಫಿಕ್ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಎಂದು ಇದರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ: ಸಂಚಾರಿ ಪೋಲೀಸ್ ಇಲಾಖೆ (ನಂದಿನಿ ಲೇಔಟ್)**

Scanned with CamScanner

ಕೆಂಪಮ್ಮ ಬಡಾವಣೆ, ಅಣ್ಣಮ್ಮ ದೇವಸ್ಥಾನದ ಹತ್ತಿರ ಸ್ಯಾನಿಟರಿ ಲೈನ್ ವಾರಕ್ಕೆ ಒಮ್ಮೆ ಬ್ಲಾಕ್ ಆಗುತ್ತಿದ್ದು, ಅದರ ಲೈನ್ ಅನ್ನು ಬದಲಿಸಬೇಕೆಂದು ಶ್ರೀ.ಹರ್ಷರವರು ಕೋರಿದರು.

**ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ).**

ಡಾ|| ರೇಣುಕ ಪ್ರಸಾದ್ ರವರು ಮಾತನಾಡಿ, 2ನೇ ಡೋಸ್ ಪಡೆದ 9 ತಿಂಗಳು ತುಂಬಿದಂತಹ ಸಾರ್ವಜನಿಕರು ಹಾಗೂ 60 ವರ್ಷ ತುಂಬಿದಂತಹ ಎಲ್ಲರೂ 3ನೇ ಡೋಸ್ ಹಾಕಿಸಿಕೊಳ್ಳಬೇಕೆಂದು ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮಾನ್ಯ ಕಾರ್ಯದರ್ಶಿಗಳು ಮುಕ್ತಾಯಗೊಳಿಸಿದರು.

Nirmala K

(ಶ್ರೀಮತಿ. ನಿರ್ಮಲ)
ಕಂದಾಯ ವಸೂಲಿಗಾರರು
ಮತ್ತು ಕಾರ್ಯದರ್ಶಿ

(ಡಾ|| ಎಂ. ಜಿ. ಹಳ್ಳಿ ಶಿವರಾಮ್) 10/02/2
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು

Scanned with CamScanner